ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂ: ಸಮಾಪನೆ/ಸುತ್ತೋಲೆ/46/2004-05 ದಿನಾಂಕ: 11-3-2005

ಸು ತ್ತೋ ಲೆ

ವಿಷಯ: ಸಮಾಪನೆಗೊಂಡ ಸಹಕಾರ ಸಂಘಗಳ ಹೆಚ್ಚುವರಿ ಮೊತ್ತವನ್ನು 'ಸಹಕಾರ ಅಭಿವೃದ್ಧಿ ನಿಧಿ' ಉಳಿತಾಯ ಖಾತೆಯಲ್ಲಿ ತೊಡಗಿಸುವ ಬಗ್ಗೆ.

ಉಲ್ಲೇಖ:
1) ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) ಇವರ ಸುತ್ತೋಲೆ ಸಂಖ್ಯೆ: ಸಮಾಪನೆ/ಸುತ್ತೋಲೆ/39/2000-01 ದಿ:2-2-2001.
2) ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಎಂಡಬ್ಲ್ಯು/103/ಸಿಎಲ್ಎಂ/2004, ದಿ:7-10-2004.

******

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 1959 ರ ಕಲಂ 73 ರನ್ವಯ ನೇಮಿಸಲ್ಪಟ್ಟ ಸಮಾಪನೆಗೊಂಡ ಸಹಕಾರ ಸಂಘಗಳ ಸಮಾಪನಾಧಿಕಾರಿಗಳು ಸಮಾಪನಾ ನಡವಳಿಯನ್ನು ಪೂರ್ಣಗೊಳಿಸಿದ ನಂತರ ಅಧಿಕವಾಗಿ ಉಳಿಯುವ ಹಣವನ್ನು ಸಹಕಾರ ಸಂಘಗಳ ಉಪನಿಬಂಧಕರ ಪಿ.ಡಿ. ಖಾತೆಗೆ ಜಮಾ ಮಾಡಲು ಉಲ್ಲೇಖ (1) ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು. ಉಲ್ಲೇಖ (2) ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 24 ಕ್ಕೆ ತಿದ್ದುಪಡಿ ಮಾಡಿರುತ್ತಾರೆ.

ಉಲ್ಲೇಖ (2) ರ ಅಧಿಸೂಚನೆಯಂತೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 24 ಕ್ಕೆ ತಿದ್ದುಪಡಿಯಾಗಿ ಜಾರಿಗೆ ಬಂದಿರುವ ರೀತ್ಯಾ ಸಮಾಪನೆಗೊಂಡ ಸಹಕಾರ ಸಂಘಗಳ ಹೆಚ್ಚುವರಿ ಮೊತ್ತವನ್ನು 'ಸಹಕಾರ ಅಭಿವೃದ್ಧಿ ನಿಧಿ' ಗೆ ವರ್ಗಾಯಿಸಲು ಸೂಚಿಸಲಾಗಿದೆ. ಆದುದರಿಂದ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ, ಕೇಂದ್ರ ಶಾಖೆ, ಚಾಮರಾಜಪೇಟೆ,

ಬೆಂಗಳೂರು –18 ಇಲ್ಲಿ 'ಸಹಕಾರ ಅಭಿವೃದ್ಧಿ ನಿಧಿ'ಯ ಉಳಿತಾಯ ಖಾತೆ ಸಂ: 9368 ಇಲ್ಲಿಗೆ ಜಮಾ ಮಾಡಿ, ಈ ಕಛೇರಿಗೆ ವರದಿ ಮಾಡಲು ಸೂಚಿಸಿದೆ.

ಸಹಿ,
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂ: ಆರ್‌ಸಿಎಸ್/ಎಲ್‌ಕ್ಯೂಡಿ/ಸುತ್ತೋಲೆ/27/2004-05 ದಿನಾಂಕ: 10-1-2004

ಸು ತ್ತೋ ಲೆ

ವಿಷಯ: ಕಾರ್ಯ ನಿಷ್ಕ್ರಿಯಗೊಂಡಿರುವ ಹಾಗೂ ಪುನಃಶ್ಚೇತನಕ್ಕೆ ಅವಕಾಶವಿಲ್ಲದ ಸಹಕಾರ ಸಂಘಗಳನ್ನು ಸಮಾಪನೆ ಮಾಡುವ ಬಗ್ಗೆ.

ಉಲ್ಲೇಖ:
1) ದಿ:18-12-2004 ರಂದು ಕೇಂದ್ರ ಕಛೇರಿಯ ಸಭಾಂಗಣದಲ್ಲಿ ನಡೆದ ಇಲಾಖಾ ಅಧಿಕಾರಿಗಳ ಸಭೆಯಲ್ಲಿ ಮಾನ್ಯ ಸಹಕಾರ ಸಚಿವರು ನೀಡಿದ ನಿರ್ದೇಶನಗಳು.
2) ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ, ಬೆಂಗಳೂರು, ಇವರ ಸುತ್ತೋಲೆ ಸಂಖ್ಯೆ: ಆಡಳಿತ / ಸಭೆ/ 12/04-05 ದಿ: 21-12-2004.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಕಾರ್ಯಸ್ಥಗಿತಗೊಂಡಿರುವ ಹಾಗೂ ಪುನಃಶ್ಚೇತನಕ್ಕೆ ಅವಕಾಶವಿಲ್ಲದ ಸಹಕಾರ ಸಂಘಗಳನ್ನು ಸಮಾಪನೆ ಮಾಡಲು ಕ್ರಮವಿಡತಕ್ಕದ್ದು ಹಾಗೂ ಈಗಾಗಲೇ ಸಮಾಪನೆಯಲ್ಲಿರುವ ಸಂಘಗಳ ಪ್ರಕ್ರಿಯೆಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಅವುಗಳ ನೋಂದಣಿಯನ್ನು ರದ್ದು ಮಾಡಲು ಮೂರು ತಿಂಗಳ ಕಾಲಮಿತಿಯ ಚೌಕಟ್ಟನ್ನು ಹಾಕಿಕೊಂಡು ಆ ಕಾಲಾವಧಿಯೊಳಗಾಗಿ ಮುಗಿಸತಕ್ಕದ್ದು. ಸಮಾಪನಾ ನಂತರದ ಪ್ರಕ್ರಿಯೆಗಳನ್ನು ಸರಳೀಕರಣಗೊಳಿಸಲು ಅಥವಾ ಸುಧಾರಿಸಲು ಅಗತ್ಯ ಕ್ರಮ ಕೈಗೊಂಡು ವಿಳಂಬವನ್ನು ತಪ್ಪಿಸಿ ದಿ;31-03-2005 ರೊಳಗೆ ಈ ಪ್ರಕರಣಗಳನ್ನು ಎಲ್ಲಾ ಹಂತಗಳಲ್ಲಿಯೂ ಕಾಲಮಿತಿಯಂತೆ ಮುಕ್ತಾಯಗೊಳಿಸಿ ಪ್ರತಿ ಮಾಹೆಯು ಈ ಕಛೇರಿಗೆ ವರದಿ ಮಾಡಲು ತಿಳಿಸಲಾಗಿದೆ.

ಸಹಿ,
ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ:1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂ: ಸಮಾಪನೆ/ಸುತ್ತೋಲೆ/39/2000-01 ದಿನಾಂಕ: 2-2-2001

ಸು ತ್ತೋ ಲೆ

ವಿಷಯ: ಸಮಾಪನಾ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಅಧಿಕವಾಗಿ ಉಳಿಯಬಹುದಾದ ಹಣವನ್ನು ತೊಡಗಿಸುವ ಬಗ್ಗೆ - ನಿರ್ದೇಶನ ನೀಡುವ ವಿಚಾರ.

******

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 73 ರನ್ವಯ ನೇಮಿಸಲ್ಪಟ್ಟ ಸಮಾಪನೆಗೊಂಡ ಸಹಕಾರ ಸಂಘಗಳ ಸಮಾಪನಾಧಿಕಾರಿಗಳು ಸಮಾಪನಾ ನಡವಳಿಯನ್ನು ಪೂರ್ಣಗೊಳಿಸಿ, ಸಂಘದ ಆಸ್ತಿ - ಜವಾಬ್ದಾರಿಯನ್ನು ವಿಲೇ ಮಾಡಿ ನೋಂದಣಿ ರದ್ದತಿಗೆ ಪ್ರಸ್ತಾವೆ ಸಲ್ಲಿಸುವ ಮೊದಲು ಯಾವ ಸಂಘದಲ್ಲಿ ಹೆಚ್ಚುವರಿ ಮೊತ್ತವು ವಿಲೇವಾರಿ ಇಲ್ಲದೆ ಬಾಕಿ ಉಳಿದಿರುತ್ತದೆಯೇ ಆ ಮೊತ್ತವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಉಪನಿಬಂಧಕರ ಹೆಸರಿನಲ್ಲಿ ಖಾತೆ ತೆಗೆದು ಠೇವಣಿಸಬಹುದು.

(1) ಆಯಾಯ ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಜಿಲ್ಲಾ ಉಪನಿಬಂಧಕರುಗಳ ಪಿ.ಡಿ. ಖಾತೆ ತೆರೆದು ಹಣವನ್ನು ಇಡತಕ್ಕದ್ದು.

(2) ಈ ರೀತಿ ಠೇವಣಿ ಮಾಡಿದ ಹಣವನ್ನು ನಿಬಂಧಕರ ಪೂರ್ವಾನುಮತಿ ಇಲ್ಲದೆ ತೆಗೆಯಬಾರದು ಮತ್ತು ಪೂರ್ವಭಾವಿಯಾಗಿ ನಿಬಂಧಕರು ಅನುಮತಿ ನೀಡಿದ ಉದ್ದೇಶಗಳಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು.

(3) ಈ ರೀತಿ ಉಳಿದ ಮೊತ್ತವನ್ನು ಠೇವಣಿಸುವಾಗ ಉಪನಿಬಂಧಕರು ಪ್ರತ್ಯೇಕ ಕ್ಯಾಷ್ ಪುಸ್ತಕವನ್ನು ಇಡತಕ್ಕದ್ದು ಮತ್ತು ಹಣ ಬಂದ ಬಗ್ಗೆ ಎಲ್ಲಾ ವಿವರಗಳನ್ನು ಒಳಗೊಂಡ ರಿಜಿಸ್ಟರ್ ಇಡತಕ್ಕದ್ದು. ಈ ರಿಜಿಸ್ಟರ್‌ನಲ್ಲಿ ಸಂಘದ ಹೆಸರು, ನೋಂದಾವಣೆ ಸಂಖ್ಯೆ, ಸಮಾಪನೆ ಆದೇಶ, ಸಮಾಪನಾಧಿಕಾರಿ ಹೆಸರು, ನೋಂದಣಿ ರದ್ದತಿ ಆದೇಶ ಇವುಗಳ ವಿವರಗಳನ್ನು ಇಡತಕ್ಕದ್ದು.

(4) ಹೆಚ್ಚುವರಿ ಉಳಿದ ಸಂಘದ ನೋಂದಾವಣಿ ರದ್ದತಿ ಅಧಿಕಾರಿ ಕಡತದಲ್ಲಿ ಈ ಹಣದ ಬಗ್ಗೆ ಠೇವಣಿ ವಿವರ ನಮೂದಿಸತಕ್ಕದ್ದು ಮತ್ತು ಆ ಕಡತಗಳನ್ನು ನಿಗದಿಪಡಿಸಿದ ಅವಧಿಯವರೆಗೆ ನಾಶ ಮಾಡತಕ್ಕದ್ದಲ್ಲ.

(5) ಈ ಮೊತ್ತವನ್ನು ಠೇವಣಿಸಿದಾಗ ಅದಕ್ಕೆ ಠೇವಣಿ ಮಾಡಿದ ಜಿಲ್ಲಾ ಸಹಕಾರ ಬ್ಯಾಂಕ್ ಕಾಲಾವಧಿ ಡಿಪಾಸಿಟ್ ಆಗಿ ಅದಕ್ಕೆ ಬಡ್ಡಿ ಕೊಡತಕ್ಕದ್ದು.

(6) ಈ ವ್ಯವಹಾರದ ಬಗ್ಗೆ ನಿಗದಿತ ನಮೂನೆಯಲ್ಲಿ ನಿಬಂಧಕರಿಗೆ ಮಾಸಿಕ ವರದಿ ನೀಡುವುದು ಮತ್ತು ಈ ಪುಸ್ತಕ ಮತ್ತು ದಾಖಲೆಗಳನ್ನು ಪ್ರತಿ ಪರಿವೀಕ್ಷಣಾಧಿಕಾರಿ ತಪ್ಪದೆ ಪರಿಶೀಲಿಸತಕ್ಕದ್ದು.

ಈ ಮೇಲ್ಕಂಡ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಿ, ಕೇಂದ್ರ ಕಛೇರಿಗೆ ವರದಿಸತಕ್ಕದ್ದು.

ಸ.ಸಂಘಗಳ ನಿಬಂಧಕರಿಂದ)
ಅನುಮೋದಿಸಲ್ಪಟ್ಟಿದೆ.)

ಸಹಿ,
ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

ಕರ್ನಾಟಕ ಸರ್ಕಾರ
ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ,ನಂ,1 ಅಲಿ ಆಸ್ಕರ್ ರಸ್ತೆ, ಬೆಂಗಳೂರು–52.

ಸಂಖ್ಯೆ: ಸಮಾಪನೆ/ಷೇಮ/36/2000–01 ದಿನಾಂಕ:23–12–2000

ಸು ತ್ತೋ ಲೆ

ವಿಷಯ: ಸಮಾಪನೆಗೊಂಡ ಸಹಕಾರ ಸಂಘಗಳಿಗೆ ಸರ್ಕಾರದಿಂದ ಮಂಜೂರಾದ ಷೇರು : ಸಾಲ ಮನ್ನಾ ಮಾಡಲು ಪ್ರಸ್ತಾವೆ ಸಲ್ಲಿಸುವ ಬಗ್ಗೆ ನಿರ್ದೇಶನ ನೀಡುವ ವಿಚಾರ.

******

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 73 ರನ್ವಯ ನೇಮಿಸಲ್ಪಟ್ಟ ಸಮಾಪನೆಗೊಂಡ ಸಹಕಾರ ಸಂಘಗಳ ಸಮಾಪನಾಧಿಕಾರಿಗಳು, ಸಂಬಂಧಿಸಿದ ಸಹಕಾರ ಸಂಘಗಳ ಪೂರ್ಣ ಪ್ರಭಾರವನ್ನು ವಹಿಸಿಕೊಂಡು ಸಮಾಪನಾ ನಡವಳಿಯನ್ನು ಪೂರ್ಣಗೊಳಿಸುವ ಸಮಯದಲ್ಲಿ ಸರ್ಕಾರದಿಂದ ಮಂಜೂರಾದ ಷೇರು : ಸಾಲವನ್ನು ಸರ್ಕಾರಕ್ಕೆ ಮರುಪಾವತಿಸಲು ಸಾಧ್ಯವಾಗದೇ ಇರುವ ಸಂದರ್ಭಗಳು ಉಂಟಾಗಿ ಕೇಂದ್ರ ಕಛೇರಿಯ ಮುಖಾಂತರ ಸರ್ಕಾರಕ್ಕೆ ಷೇರು : ಸಾಲ ಮನ್ನಾ ಪ್ರಸ್ತಾವೆಯನ್ನು ಸಲ್ಲಿಸುವ ಪರಿಪಾಠವು ರೂಢಿಯಲ್ಲಿರುತ್ತದೆ. ಆದರೆ, ಸದರಿ ಪ್ರಸ್ತಾವೆಯಲ್ಲಿ ಅವಶ್ಯಕ ವಿವರಗಳು ಇಲ್ಲದೆ ಇರುವುದು ಕಂಡು ಬಂದಿರುತ್ತದೆ. ಇದರಿಂದಾಗಿ ಸಮಾಪನಾ ನಡವಳಿಗಳು ಪೂರ್ಣಗೊಳ್ಳಲು ವಿಳಂಬವಾಗಿ ಸಾಧಿಸುವ ಪ್ರಗತಿಯು ಶೂನ್ಯವಾಗುತ್ತಿದೆ. ಆದ್ದರಿಂದ ಇನ್ನು ಮುಂದಾದರೂ ಈ ಕೆಳಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ತಮ್ಮ ತಮ್ಮ ಕಾರ್ಯವ್ಯಾಪ್ತಿಗೆ ಬರುವ ಸಮಾಪನೆಗೊಂಡ ಸಾಲ : ಷೇರು ಮನ್ನಾ ಪ್ರಸ್ತಾವೆಯನ್ನು ಸಲ್ಲಿಸುವಾಗ :

1) ಸಂಘದ ಲೆಕ್ಕ ಪರಿಶೋಧನೆಯಾದ ಸಾಲು

2) ಸರ್ಕಾರದಿಂದ ಮಂಜೂರಾದ ಆದೇಶ ಸಂಖ್ಯೆ, ದಿನಾಂಕ ಮತ್ತು ಮೊತ್ತದ ಪ್ರತಿ, ಪ್ರತಿ ದೊರಕದಿದ್ದಲ್ಲಿ ಅದರ ಸಂಖ್ಯೆ ಮತ್ತು ದಿನಾಂಕ, ಮೊತ್ತ ನಮೂದಿಸತಕ್ಕದ್ದು.

3) ಸಮಾಪನಾ ನಡವಳಿಯಲ್ಲಿ 'ಶೂನ್ಯ'ವಾಗಿರುವಂತಹ ಆಸ್ತಿ ಜವಾಬ್ದಾರಿಯ ತಃಖ್ತೆಯ ಉಲ್ಲೇಖ, ಹಾಗೂ ಅದರ ಪ್ರತಿ.

4) ಸರ್ಕಾರಕ್ಕೆ ಸಾಲ : ಷೇರು ಮರುಪಾವತಿಸಿದ್ದಲ್ಲಿ ರಶೀದಿಯ ಪ್ರತಿ.

ಸಾಲ : ಷೇರು ಮನ್ನಾ ಪ್ರಸ್ತಾವೆಯಲ್ಲಿ ಇವಿಷ್ಟು ನಿರ್ದಿಷ್ಟವಾಗಿರಬೇಕು. ಇವುಗಳ ಯಾವ ಪುರಾವೆಯು ಸಿಗದಿದ್ದಲ್ಲಿ ನೀವಿಟ್ಟ ಕ್ರಮದ ವಿವರಗಳನ್ನು ಸಕಾರಣವಾಗಿ ನೀಡತಕ್ಕದ್ದು ಮತ್ತು ಅದು ಸಿಗದ ಪರಿಸ್ಥಿತಿ ವಿವರಿಸಿ ಆ ಮೊತ್ತ ಮನ್ನಾ ಮಾಡಲು ಕೋರಿಕೆ ಸಲ್ಲಿಸುವುದು.

ಮೇಲ್ಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಂಬಂಧಿಸಿದ ಸಮಾಪನಾಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಲಾಗಿದೆ.

ಸಹಿ,
ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

ಕರ್ನಾಟಕ ಸರ್ಕಾರ
ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ,ನಂ,1 ಅಲಿ ಆಸ್ಕರ್ ರಸ್ತೆ, ಬೆಂಗಳೂರು–52.

ಸಂಖ್ಯೆ: ಡಿಎಲ್ಎಸ್/ಎಲ್ಕ್ಯೂಡಿ/ಸಿಐಆರ್/95–96 ದಿನಾಂಕ:21–8–1995

ಸು ತ್ತೋ ಲೆ

ವಿಷಯ: ಸಮಾಪನೆಗೊಂಡ ಸಹಕಾರ ಸಂಘಗಳ ಸಮಾಪನಾ ನಡವಳಿಕೆಯನ್ನು ಪೂರ್ಣಗೊಳಿಸುವ ಬಗ್ಗೆ ಸಮಾಪನಾಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ನಿರ್ದೇಶನ ನೀಡುವ ವಿಚಾರ.

******

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 73 ರನ್ವಯ ನೇಮಿಸಲ್ಪಟ್ಟ ಸಮಾಪನೆಗೊಂಡ ಸಹಕಾರ ಸಂಘಗಳ ಸಮಾಪನಾಧಿಕಾರಿಗಳು, ಸಂಬಂಧಿಸಿದ ಸಹಕಾರ ಸಂಘಗಳ ಪೂರ್ಣ ಪ್ರಭಾರವನ್ನು ವಹಿಸಿಕೊಳ್ಳುವಲ್ಲಿ ವಿಳಂಬವುಂಟು ಮಾಡುತ್ತಿರುವುದು ಹಾಗೂ ಸಮಾಪನಾ ನಡವಳಿಕೆಯಲ್ಲಿ ಮಂದಗತಿಯನ್ನು ಅನುಸರಿಸುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಈ ರೀತಿಯ ವಿಳಂಬದಿಂದಾಗಿ ಲೆಕ್ಕಪುಸ್ತಕಗಳು ಹಾಗೂ ಇತರೆ ದಾಖಲಾತಿಗಳು ಲಭ್ಯವಾಗದ ದುಃಸ್ಥಿತಿಯುಂಟಾಗಿ ಸಂಬಂಧಿಸಿದ ಸಹಕಾರ ಸಂಘಗಳ ಆಸ್ತಿ–ಜವಾಬ್ದಾರಿಗಳು ಪರಿಣಾಮಕಾರಿಯಾಗಿ ವಿಲೇವಾರಿಯಾಗುತ್ತಿಲ್ಲ. ಹೀಗಾಗಿ ಈ ಸಹಕಾರ ಸಂಘಗಳ ಸಮಾಪನಾ ನಡವಳಿಕೆಗಳು ಪೂರ್ಣಗೊಳ್ಳುತ್ತಿಲ್ಲ. ಆದ್ದರಿಂದ ಇನ್ನು ಮುಂದೆಯಾದರೂ ಈ ಕೆಳಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. ಸಹಕಾರ ಸಂಘಗಳನ್ನು ಸಮಾಪನಾಗೊಳಿಸಿ ಆದೇಶ ಹೊರಡಿಸಿದ 15 ದಿವಸಗಳೊಳಗಾಗಿ ಸಂಬಂಧಿಸಿದ ಸಮಾಪನಾಧಿಕಾರಿಗಳು ಸಂಬಂಧಿಸಿದ ಸಹಕಾರ ಸಂಘದ ಲೆಕ್ಕಪುಸ್ತಕಗಳ ಪೂರ್ಣ ಪ್ರಭಾರವನ್ನು ಪಡೆದು ಪ್ರಭಾರ ಪಟ್ಟಿಯ ಒಂದು ಪ್ರತಿಯನ್ನು ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಸಲ್ಲಿಸುವುದು. ಒಂದು ಪಕ್ಷ ಕಾರ್ಯದರ್ಶಿ : ಪದಾಧಿಕಾರಿಗಳಾಗಲಿ ಪ್ರಭಾರ ವಹಿಸಿಕೊಡದಿದ್ದಲ್ಲಿ ಅಂತವರ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 109 ರಡಿಯಲ್ಲಿ ಕ್ರಮ ಜರುಗಿಸುವ ಬಗ್ಗೆ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಪ್ರಸ್ತಾವೆ ಸಲ್ಲಿಸುವುದು. ಸಮಾಪನೆಗೊಂಡ ಸಹಕಾರ ಸಂಘಗಳ ಯಾವುದೇ ದಾಖಲೆಗಳು ಲಭ್ಯವಿಲ್ಲದ ಪ್ರಕರಣಗಳಲ್ಲಿ ಇಂತಹ ಪ್ರಕರಣಕ್ಕೆ

ಕಾರಣರಾದವರನ್ನು ಪತ್ತೆ ಹಚ್ಚಿ ಸಂಬಂಧಿಸಿದವರ ಮೇಲೆ ಕಾನೂನಿನನ್ವಯ ಕ್ರಮ ಜರುಗಿಸುವ ಏರ್ಪಾಡು ಮಾಡುವ ಮೂಲಕ ಲೆಕ್ಕ ಪುಸ್ತಕಗಳ ನಿರ್ವಹಣೆಯನ್ನು ಸೂಕ್ತವಾಗಿಡಲು ಪ್ರಯತ್ನಿಸುವುದು.

2. ಸಮಾಪನಾಧಿಕಾರಿಗಳು ಪ್ರಭಾರ ವಹಿಸಿಕೊಂಡ ಕೂಡಲೇ ಸಂಬಂಧಿಸಿದ ಸಹಕಾರ ಸಂಘದ ಲೆಕ್ಕಪರಿಶೋಧನಾ ವರದಿಯ ಆಧಾರದ ಮೇಲೆ ಆಸ್ತಿ ಜವಾಬ್ದಾರಿಗಳನ್ನು ಪಟ್ಟಿ ಮಾಡಿ ಆಸ್ತಿಗಳು ವಸೂಲಾದಂತೆ ಜವಾಬ್ದಾರಿಗಳನ್ನು ಆದ್ಯತೆಯ ಮೇರೆಗೆ ತೀರುವಳಿ ಮಾಡುವುದು. ಈ ಬಗ್ಗೆ ಆದ್ಯತಾ ಪಟ್ಟಿಯನ್ನು ತಯಾರಿಸಿ ಸಂಬಂಧಿಸಿದ ಇಲಾಖಾಧಿಕಾರಿಗಳ ಅನುಮತಿ ಪಡೆಯತಕ್ಕದ್ದು.

ಸಮಾಪನಾ ನಡವಳಿಕೆಯನ್ನು ಪೂರ್ಣಗೊಳಿಸುವ ಬಗ್ಗೆ ಸಾಧಿಸಿದ ಪ್ರಗತಿಯ ವರದಿಯನ್ನು ಪ್ರತಿ ತ್ರೈಮಾಸಿಕ ಅವಧಿಗೊಮ್ಮೆ ಸಂಬಂಧಪಟ್ಟ ಜಿಲ್ಲಾ ಉಪನಿಬಂಧಕರಿಗೆ ಸಲ್ಲಿಸುವುದು. ಉಪನಿಬಂದಕರು ಪ್ರತಿ ಮಾಸ ಜಿಲ್ಲಾ ಮಟ್ಟದಲ್ಲಿ ಸಮಾಪನಾಧಿಕಾರಿಗಳ ಕಾರ್ಯಪ್ರಗತಿ ಪರಿಶೀಲನಾ ಸಭೆಗಳನ್ನು ಏರ್ಪಡಿಸಿ ಸಮಾಪನೆಯಲ್ಲಿರುವ ಪ್ರತಿಯೊಂದು ಸಹಕಾರ ಸಂಘದ ಸಮಾಪನಾ ನಡವಳಿಕೆಯ ಬಗ್ಗೆ ವಿಮರ್ಶಿಸಿ ಸೂಕ್ತ ನಿರ್ದೇಶನಗಳನ್ನು ನೀಡಿ ಈ ಬಗ್ಗೆ ಸಂಯುಕ್ತ ನಿಬಂಧಕರಿಗೆ ವರದಿ ಸಲ್ಲಿಸುವುದು. ಅಲ್ಲದೆ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ವಹಿಯೊಂದನ್ನು ಪ್ರಾರಂಭಿಸಿ, ಈ ವಹಿಯಲ್ಲಿ ಪ್ರತಿಯೊಂದು ಸಂಘದ ಆಸ್ತಿ–ಜವಾಬ್ದಾರಿಗಳ ವಿವರಗಳನ್ನು ಹಾಗೂ ಸಮಾಪನಾ ನಡವಳಿಕೆಯ ಹಂತವನ್ನು ನಮೂದಿಸತಕ್ಕದ್ದು.

3. ಸಮಾಪನೆಗೊಂಡ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿಯತಕಾಲಿಕವಾಗಿ ಜರುಗಿಸಲು ಸಂಬಂಧಿಸಿದ ಲೆಕ್ಕಪರಿಶೋಧನಾ ಇಲಾಖಾಧಿಕಾರಿಗಳೊಂದಿಗೆ ವ್ಯವಹರಿಸಿ ನಿಗದಿತ ಸಮಯದಲ್ಲಿ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಲು ಸಹಕರಿಸುವುದು.

4. ಅಧಿಕ ಪ್ರಭಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಮಾಪನಾಧಿಕಾರಿಗಳು ಅವರ ಮೂಲ ಹುದ್ದೆಯಿಂದ ವರ್ಗಾವಣೆಯಾದ ಸಂದರ್ಭಗಳಲ್ಲಿ ಅವರು ಸಮಾಪನಾಧಿಕಾರಿಯಾಗಿರುವ ಸಹಕಾರ ಸಂಘದ ಲೆಕ್ಕಪುಸ್ತಕಗಳ ಪೂರ್ಣ ಪ್ರಭಾರವನ್ನು ನಂತರದ ಅಧಿಕಾರಿಗಳಿಗೆ ಕೂಡಲೇ ವಹಿಸಿಕೊಡತಕ್ಕದ್ದು. ಲೆಕ್ಕಪುಸ್ತಕಗಳ ಪ್ರಭಾರವನ್ನು ವರ್ಗಾವಣೆಯಾದ ಅಧಿಕಾರಿಯು ಅವರ ನಂತರದ ಅಧಿಕಾರಿಗಳಿಗೆ ವಹಿಸಿ ಕೊಡದ ಪಕ್ಷದಲ್ಲಿ ಅವರ ವಿರುದ್ಧ ಶಿಸ್ತಿನ ಕ್ರಮವನ್ನು ಸಂಬಂಧಪಟ್ಟ ಸಹಾಯಕ ನಿಬಂಧಕರು, ಉಪನಿಬಂಧಕರು, ಸಂಯುಕ್ತ ನಿಬಂಧಕರು ಜರುಗಿಸುವುದು.

5. ಸಮಾಪನೆಗೊಂಡ ಸಹಕಾರ ಸಂಘಗಳ ಆದ್ಯತಾ ಪಟ್ಟಿಯ ಪ್ರಸ್ತಾವೆಯಲ್ಲಿನ ಅಂಕಿ ಅಂಶಗಳಿಗೂ, ಲೆಕ್ಕಪರಿಶೋಧನಾ ವರದಿಯಲ್ಲಿನ ಅಂಕಿ ಅಂಶಗಳಿಗೂ ಬಹಳಷ್ಟು ವ್ಯತ್ಯಾಸಗಳು ಕಂಡು ಬರುತ್ತಿದ್ದು ಇಂತಹ ವ್ಯತ್ಯಾಸಗಳಿಗೆ ಸ್ಪಷ್ಟ ವಿವರಣೆ ನೀಡತಕ್ಕದ್ದು.

6. ಸಮಾಪನಾಧಿಕಾರಿಗಳು ಸಂಬಂಧಪಟ್ಟ ಲೆಕ್ಕಪುಸ್ತಕಗಳ ಪ್ರಭಾರವನ್ನು ಅವರ ಕಛೇರಿಯ ಸಹಾಯಕರಿಗೆ ವಹಿಸುತ್ತಿರುವುದು ಹಾಗೂ ಅವುಗಳ ಆಗುಹೋಗುಗಳಿಗೆ ಸಹಾಯಕರುಗಳನ್ನೇ ಜವಾಬ್ದಾರರನ್ನಾಗಿ ಮಾಡಲು ಪ್ರಯತ್ನಿಸುವುದು ಇತ್ತೀಚೆಗೆ ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಸಮಾಪನಾಧಿಕಾರಿಯ ವಶದಲ್ಲಿರಬೇಕಾಗಿರುವ ಸಂಘದ ಲೆಕ್ಕಪುಸ್ತಕಗಳನ್ನು ಯಾವ ಕಾರಣಕ್ಕೂ ಅವರ ಕಛೇರಿಯ ಸಹಾಯಕರುಗಳಿಗಾಗಲೀ, ಇತರೆ ನೌಕರರುಗಳಿಗಾಗಲೀ ವಹಿಸದಿರುವಂತೆ ಸೂಚಿಸಲಾಗಿದೆ. ಇಂತಹ ಪ್ರಕರಣಗಳೇನಾದರೂ ಕಂಡು ಬಂದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗವುದಾಗಿಯೂ ಸಹ ಎಚ್ಚರಿಕೆ ನೀಡತಕ್ಕದ್ದು.

ಮೇಲ್ಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸಂಬಂಧಿಸಿದ ಸಮಾಪನಾಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಲಾಗಿದೆ.

ಸಹಿ,

ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

ಕರ್ನಾಟಕ ಸರ್ಕಾರ
ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ,ನಂ,1 ಅಲಿ ಆಸ್ಕರ್ ರಸ್ತೆ, ಬೆಂಗಳೂರು–52.

ಸಂಖ್ಯೆ:ಆರ್ಎಸ್ಆರ್/43/ಎಕ್ಸ್ಎಂಸಿ/92–93 ದಿನಾಂಕ:18–3 –1995

ಸು ತ್ತೋ ಲೆ ಸಂ ಖ್ಯೆ – 34

ವಿಷಯ: ಸಮಾಪನೆಯಲ್ಲಿರುವ ಸಹಕಾರ ಸಂಘಗಳು ಲೆಕ್ಕಪುಸ್ತಕಗಳನ್ನು ಇಡಲು ನಮೂನೆಗಳನ್ನು ನಿಗದಿಪಡಿಸುವ ಬಗ್ಗೆ

ಉಲ್ಲೇಖ: ಸರ್ಕಾರದ ಕ್ರ. ಸಿಎಂಡಬ್ಲ್ಯು/60/ಸಿಎಲ್ಎಂ/94 ದಿ:28–01–95 ರ ಪತ್ರ

******

1960 ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳ ನಿಯಮ 33 (ಕೆ) ಪ್ರಕಾರ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ಸಮಾಪನಾಧಿಕಾರಿಗಳು, ಕಾಲಕಾಲಕ್ಕೆ ಸಹಕಾರ ಸಂಘಗಳ ನಿಬಂಧಕರು ನಿಗದಿಪಡಿಸುವ ನಮೂನೆಗಳಲ್ಲಿ, ಸದರಿ ಸಂಘಗಳ ಲೆಕ್ಕ ಪುಸ್ತಕಗಳನ್ನು ಇಡಬೇಕಾಗುತ್ತದೆ.

02. ಸಮಾಪನೆಯಲ್ಲಿರುವ ಸಹಕಾರ ಸಂಘಗಳು ಯಾವ ರೀತಿಯಲ್ಲಿ ಮತ್ತು ಯಾವ ನಮೂನೆಗಳಲ್ಲಿ ಲೆಕ್ಕಪುಸ್ತಕಗಳನ್ನು ಇಡಬೇಕಾಗುತ್ತದೆ ಎಂಬ ವಿಷಯದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಭೆ ನಡೆಯಿತು. ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ನಿರ್ದೇಶಕರಿಂದ ಸದರಿ ನಮೂನೆಗಳನ್ನು ನಿಬಂಧಕರು ಪಡೆದು ಸಮಾಪನಾಧಿಕಾರಿಗಳಿಗೆ ಅಳವಡಿಸಿಕೊಳ್ಳಲು ಕಳುಹಿಸಬೇಕೆಂದು ತೀರ್ಮಾನವಾಯಿತು. ಲೆಕ್ಕ ಪರಿಶೋಧನಾ ನಿರ್ದೇಶಕರು ಸರ್ಕಾರಕ್ಕೆ ಸೂಚಿಸಿದ್ದ ನಮೂನೆಗಳನ್ನು ಮತ್ತು ಈ ಕಛೇರಿಯು ಸೂಚಿಸಿದ್ದ ಕೆಲವು ನಮೂನೆಗಳನ್ನು ಸಹ ಒಪ್ಪಿ ಸದರಿ ನಮೂನೆಗಳನ್ನು ನಿಗದಿಪಡಿಸಬೇಕೆಂದು ಸರ್ಕಾರವು ಉಲ್ಲೇಖದ ಪತ್ರದಲ್ಲಿ ತಿಳಿಸಿರುತ್ತದೆ.

03. ಆದ್ದರಿಂದ ಸಮಾಪನೆಗೊಂಡಿರುವಂತಹ ಸಹಕಾರ ಸಂಘಗಳಿಗೆ ಈ ಸುತ್ತೋಲೆಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ಲೆಕ್ಕ ತಃಖ್ತೆ : ಪುಸ್ತಕಗಳ ನಮೂನೆಗಳನ್ನು ನಿಗದಿಪಡಿಸಲಾಗಿದೆ. ಅದರ ಪ್ರಕಾರ ಸಂಘದ ಲೆಕ್ಕ ಪುಸ್ತಕಗಳನ್ನು ಇಡಬೇಕೆಂದು ಸಮಾಪನೆಗೊಂಡಿರುವಂತಹ ಸಹಕಾರ ಸಂಘಗಳ ಸಮಾಪನಾಧಿಕಾರಿಗಳಿಗೆ ಈ ಮೂಲಕ ತಿಳಿಸಲಾಗಿದೆ.

04. ಸಹಕಾರ ಸಂಘಗಳ ವಿಭಾಗೀಯ ಸಂಯುಕ್ತ ನಿಬಂಧಕರುಗಳು, ಜಿಲ್ಲಾ ಉಪನಿಬಂಧಕರುಗಳು ಮತ್ತು ಉಪವಿಭಾಗದ ಸಹಾಯಕ ನಿಬಂಧಕರುಗಳು ಅವರವರ ಕಾರ್ಯ ವ್ಯಾಪ್ತಿಯಲ್ಲಿ ಸಮಾಪನೆಯಲ್ಲಿರುವ ಸಹಕಾರ ಸಂಘಗಳ ಸಮಾಪನಾಧಿಕಾರಿಗಳಿಗೆ ಈ ಸುತ್ತೋಲೆಯ ಹಾಗೂ ಅನುಬಂಧದ ಪ್ರತಿಗಳನ್ನು ಕಳುಹಿಸುವುದು ಹಾಗೂ ಸಮಾಪನೆಯಲ್ಲಿರುವ ಸಂಘಗಳು ಈ ನಮೂನೆಗಳಲ್ಲಿ ಲೆಕ್ಕ ತಃಖ್ತೆ : ಪುಸ್ತಕಗಳನ್ನು ಇಡುವಂತೆ ನೋಡಿಕೊಳ್ಳತಕ್ಕದ್ದು.

ಸಹಿ,
(ವಿ. ಮಧು)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ANNNEXRE TO THE CURCULAR NO . RSR/43/XMC/92-93 DATED 18-303-1995

STATEMENT - 'A' ANNEXURE										
Sl. No.	Name of the Liquidated Society	Liquidation		On the date of liquidation		Approval obtained for filing priority	Programme up to previous quarter		Balance at the quarter ending	
		Order No. & Date	Liquidation Order issued by	Assets to be realized	Liability to be disposed off		Assets recovered up to previous quarter	Liabilities discharged	Assets	Liabilities
1	2	3	4	5	6	7	8	9	10	11

Contd.....

Liabilities discharged upto previous quarter.				Any other as per approved priority list	Balance at the quarter under report					Remarks
Govt. Loan		Bank Loan			Govt. Loan		Bank Loan		Others	
Principle	Interest	Principle	Interest		Principle	Interest	Principle	Interest		
12	13	14	15	16	17	18	19	20	21	22

(Signature of the Liquidator & Seal.)

ಕರ್ನಾಟಕ ಸರ್ಕಾರ
ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ,ನಂ,1 ಅಲಿ ಆಸ್ಕರ್ ರಸ್ತೆ, ಬೆಂಗಳೂರು–52.

ಸಂಖ್ಯೆ: ಡಿಎಲ್ಎಸ್/ಎಲ್ಕ್ಯೂಡಿ/ಡಿ2/91–92 ದಿನಾಂಕ: 13–7–92.

ಸು ತ್ತೋ ಲೆ

ವಿಷಯ: ಸಮಾಪನೆಗೊಂಡ ಸಹಕಾರ ಸಂಘಗಳ ಪ್ರತಿಯೊಂದು ಚರ ಮತ್ತು ಸ್ಥಿರ ಆಸ್ತಿಗಳ ಛಾರ್ಜ್ ತೆಗೆದುಕೊಂಡ ಬಗ್ಗೆ ವಿವರವಾದ ಪಟ್ಟಿ ಸಲ್ಲಿಸುವ ಕುರಿತು.

******

ಸಮಾಪನೆಗೊಂಡ ಸಹಕಾರ ಸಂಘಗಳ ಪ್ರತಿಯೊಂದು ಚರ ಮತ್ತು ಸ್ಥಿರ ಆಸ್ತಿಗಳನ್ನು ಛಾರ್ಜ್ ತೆಗೆದುಕೊಂಡ ಬಗ್ಗೆ ಸಮಾಪನಾಧಿಕಾರಿಗಳಲ್ಲಿ ಅವಶ್ಯಕ ವಿವರಗಳು ಇಲ್ಲದೆ ಇರುವುದು ಇತ್ತೀಚಿನ ಭೇಟಿ ಸಂದರ್ಭದಲ್ಲಿ ಕಂಡು ಬಂದಿರುತ್ತದೆ. ಆದ್ದರಿಂದ ಸಮಾಪನಾಧಿಕಾರಿಗಳು ಛಾರ್ಜ್ ತೆಗೆದು ಕೊಂಡ ಕೂಡಲೇ ಪ್ರತಿಯೊಂದು ಚರ ಮತ್ತು ಸ್ಥಿರ ಆಸ್ತಿಗಳ ಪಟ್ಟಿಯನ್ನು ಅವುಗಳ ಅಂದಾಜು ಮೌಲ್ಯದೊಂದಿಗೆ ಸಂಬಂಧಪಟ್ಟ ಕ್ಷೇತ್ರ ನಿಬಂಧಕರಿಗೆ ಸಲ್ಲಿಸತಕ್ಕದ್ದು ಮತ್ತು ಸದರಿ ಛಾರ್ಜ್ ಲಿಸ್ಟ್ ಪ್ರತಿಯನ್ನು ಸದರಿ ಅಧಿಕಾರಿಗಳ ಮೇಲಾಧಿಕಾರಿಗೆ ಸಹ ಸಲ್ಲಿಸತಕ್ಕದ್ದು. ಇವುಗಳನ್ನು ಆಯಾಯ ಅಧಿಕಾರಿಗಳು ಸಂರಕ್ಷಿತ : ಸುರಕ್ಷಿತ ಆದ್ಯತೆಯ ಪಟ್ಟಿಯ ಪ್ರಕಾರ ಭದ್ರವಾಗಿಡಿಸಿ, ಸದರಿ ಸಂಘದ ನೋಂದಣಿ ರದ್ದತಿಯ ಸಮಯದಲ್ಲಿ ಎಲ್ಲಾ ವಸ್ತುಗಳನ್ನು ಮೌಲ್ಯಕ್ಕನುಸಾರವಾಗಿ ಮಾರಾಟ ಮಾಡಲಾಗಿದೆ ಎಂಬ ಬಗ್ಗೆ ಖಚಿತ ಅಭಿಪ್ರಾಯ ವ್ಯಕ್ತ ಪಡಿಸತಕ್ಕದ್ದು.

ಸಹಿ,
ಸಹಕಾರ ಸಂಘಗಳ ಅಪರ ನಿಬಂಧಕರು,
(ಕೈಗಾರಿಕೆ ಮತ್ತು ಇತರೆ)

No. DLS/D2/LQD/91-92

Office of the Registrar of
Co-operative Societies,
No.1, Ali Askar Road,
Bangalore, dt: 1-4-1992.

CIRCULAR

Sub: Disposal of Assets and Liabilities on
Priority basis.

Ref: This office Circular No. DLS/LQD/CIR/91-92
DT: 24-3-1992 Regarding Liquidation proceedings.

*****

It is observed that the Liquidators who are appointed under section 73 of the KCS Act 1959 for winding up of the Liquidated society under section 72 of the Act are not strictly adhering to the rules and Circulars. As a result, realization of assets and the disposal of Liabilities are not properly carried out by the Liquidators. As already directed in this office circular cited above, the Liquidators shall have the power U/R 33 (1) (c) to decide the question of priority arising between claimants and shall draw up a scheme for the payment of their dues subject to the control of the Registrar as envisaged under section 74 (2) of the Act.

For example, the realization of assets and discharge of liabilities have to be taken up as given below for guidance.

Priority List under Liabilities

1) Un-disbursed Salaries
2) All types of State and Central Taxes etc.,
3) Audit Fee
4) Government loan and interest
5) Cash Credit Loan (Government guarantee loans)
6) Co-operative Bank Loans
7) Investment by Members
    1) Fixed deposits
    2) Recurring deposits
    3) S/B Account
    4) Any other investments.

8) 1. (a) Un-disbursed D.A. & T.A. to staff
9) A) Other dues
   B) Share Investments by Co-operative Institution
   C) Individual shares.

Priority List under Assets

1) Loan from Members (all types)
2) Deposits and Advances paid to individuals / Institutions
3) Creditors
4) Recoveries from the staff towards excess T.A. / D.A. / Salary Advances etc.,
5) Misappropriation amounts to be recovered.
6) Disposal of closing stocks
7) Disposal of Plants and Machinery
8) Disposal of furniture and fixtures
9) Cash at Bank
10) Cash on hand.

While discharging the liabilities the following points are to be observed.

1) Where the assets realized are less than the liabilities to be paid, the assets realized are to be distributed among the claimants after fixing the pro-rata which may also be got approved by the competent Registrar, as far as Share Capital is concerned.

2) All the Liquidators should seek approval for the priority list within 2 months after assuming the charge as Liquidators.

3) The Liquidator has to furnish the progress made as per approved priority list to the competent Registrar in the form appended to the reference as cited above.

Sd/-
Additional Registrar of C.S.
(Indl. & Misc.)

No. DLS/D2/MISC/14/91-92

Office of the Registrar of
Co-operative Societies,
No.1, Ali Askar Road,
Bangalore, dt: 19-Sept-1991.

10

CIRCULAR

Sub: Duties and Responsibilities of the Liquidator.

*****

On several occasions, it is observed that most of the Liquidators appointed as per section 72 of the KCS Act for winding up of the Co-operative society are not discharging their duties as per procedure laid down in the Act and Rules. It is, therefore, directed to all the Liquidators to follow up the action as detailed below, besides the other procedures shown in the Act and rules.

(1) All the Liquidators appointed under section 72 of the K.C.S. Act should immediately take charge and intimate to the appointing authority along with a copy of such charge report to the competent Registrar.

(2) A detailed balance sheet of the Liquidated society should be sent to the competent authority without delay.

(3) The Liquidators should decide the question of priority arising between claimants subject to the control of the Registrar, and get the priority approved from the competent Registrar.

(4) The Liquidator shall submit to the Registrar a quarter reports in respect of progress made in liquidating the society along with a certificate of cash balance at the end of the quarter, issued by the Bankers. A copy of such report should also be endorsed to the competent Registrar.

(5) The immediate competent authority should verify the books of accounts maintained by the liquidators, every quarterly as to ascertain the correctness of the Accounts and with reference to transaction and closing cash book as issued by the Bankers. A report should be furnished to the Registrar in this respect, along with copy of the report furnished by the Liquidators.

(6) All the Departmental Officers are directed to circulate these instructions among the Liquidators under their control, with instruction to follow them strictly.

Sd/-
Registrar of Co-operative
Societies in Karnataka, Bangalore.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ಆಲಿ ಆಸ್ಕರ್ ರಸ್ತೆ, ಬೆಂಗಳೂರು

ಕ್ರ.ಸಂ: ಡಿಎಲ್ಎಸ್/ಇತರೆ/15/87–88 ದಿನಾಂಕ: 17–2–88

ಸು ತ್ತೋ ಲೆ

ವಿಷಯ: ಸಹಕಾರ ಸಂಘಗಳ ಕಾಯ್ದೆ 1959 ಕಲಂ 72 ರನ್ವಯ ದುಂಡುಸುತ್ತಲ್ಪಟ್ಟ ಸಹಕಾರ ಸಂಘಗಳ ಆಸ್ತಿಯನ್ನು ಸಮಾಪನಾಧಿಕಾರಿಯು ವಶಕ್ಕೆ ತೆಗೆದುಕೊಳ್ಳುವ ಬಗ್ಗೆ ಮತ್ತು ಸಮಾಪನಾಧಿಕಾರಿಗೆ ಸಂಭಾವನೆಯನ್ನು ಪಾವತಿಸುವ ಬಗ್ಗೆ ಸೂಚನೆ.

ಉಲ್ಲೇಖ: ಸರ್ಕಾರದ ಪತ್ರದ ಕ್ರಮಾಂಕ: ಸಿಎಂಡಬ್ಲ್ಯು/280/ ಸಿಎಲ್ಎಂ 87 ದಿ: 18, 19–12–1987.

*****

ಸಹಕಾರ ಸಂಘಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ರನ್ವಯ ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 73 (1) ರನ್ವಯ ಸಮಾಪನಾಧಿಕಾರಿಗಳನ್ನು ನೇಮಿಸಿ ಹಲವು ವರ್ಷಗಳೇ ಕಳೆದರೂ, ಸಮಾಪನಾಧಿಕಾರಿಗಳು ಸಂಘಗಳ ವಿಶಿಷ್ಟ ಪ್ರಭಾರವನ್ನು ವಹಿಸಿಕೊಳ್ಳದೇ ಇರುವ ಅನೇಕ ಪ್ರಕರಣಗಳನ್ನು ಸರ್ಕಾರವು ತೀವ್ರವಾಗಿ ಗಮನಿಸಿರುತ್ತದೆ. ಕೆಲವು ಪ್ರಕರಣಗಳಲ್ಲಿ ಸಂಘದ ಪ್ರಭಾರವನ್ನು ತೆಗೆದುಕೊಳ್ಳದೆ ಆದೇಶ ಹೊರಡಿಸಿದ ದಿನಾಂಕದಿಂದಲೇ ಸಮಾಪನಾಧಿಕಾರಿಗಳು ಸಂಭಾವನೆ ಪಡೆಯುತ್ತಿರುವ ಘಟನೆಗಳೂ ಸಹ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದಕಾರಣ ಇನ್ನು ಮುಂದೆ ಸಮಾಪನೆಗೊಳಿಸಲ್ಪಟ್ಟ ಸಂಘದ ಪ್ರಭಾರವನ್ನು ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಸಮಾಪನಾಧಿಕಾರಿಗಳು ಸಂಘಗಳ ಆಸ್ತಿ ಮತ್ತು ಲೆಕ್ಕ ಪುಸ್ತಕಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳತಕ್ಕದೆಂದೂ ಹಾಗೂ ಸಂಘದ ಪ್ರಭಾರವನ್ನು ವಹಿಸಿಕೊಂಡ ದಿನಾಂಕದಿಂದ ಮಾತ್ರವೇ ಅವರು ಸಂಭಾವನೆಯನ್ನು ಅನುಮೋದನೆಯಂತೆ ಪಡೆಯಲರ್ಹರೆಂಬುದನ್ನು ಸಂಬಂಧಿಸಿದ ಎಲ್ಲಾ ಇಲಾಖಾಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಉಲ್ಲೇಖದ ಪತ್ರದಲ್ಲಿ ಸರ್ಕಾರವು ಆದೇಶಿಸಿರುತ್ತದೆ.

ಸರ್ಕಾರದ ಆದೇಶದಂತೆ ಸಂಬಂಧಪಟ್ಟ ಎಲ್ಲಾ ಇಲಾಖಾಧಿಕಾರಿಗಳು ಸಂಘವನ್ನು ಸಮಾಪನೆಗೊಳಿಸಿ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಸಮಾಪನಾಧಿಕಾರಿಗಳು ವಿಶಿಷ್ಟ ಪ್ರಭಾರವನ್ನು ವಹಿಸಿಕೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಈ ಬಗ್ಗೆ ತೊಂದರೆಗಳಿದ್ದಲ್ಲಿ ಕಾಲಾವಕಾಶ ಕೋರಿ ಸಮಾಪನೆಗೆ ಆದೇಶಿಸಿದ ಅಧಿಕಾರಿಯ ಅನುಮತಿ ಪಡೆಯತಕ್ಕದ್ದು. ಪ್ರಭಾರ ವಹಿಸಿಕೊಂಡುದದರ ಬಗ್ಗೆ ಹಾಗೂ ಸಮಾಪನಾ ಪ್ರಗತಿಯನ್ನು ಇಲಾಖಾಧಿಕಾರಿಗಳು ತಮ್ಮ ಮಟ್ಟದ ಸಭೆಗಳಲ್ಲಿ ವಿಮರ್ಷಿಸಿ ಸೂಕ್ತ ಕ್ರಮಗಳನ್ನು ಜರುಗಿಸತಕ್ಕದ್ದು. ಸಮಾಪನಾಧಿಕಾರಿಗಳಿಗೆ ಪಾವತಿಸುವ ಪ್ರಸ್ತಾವಗಳನ್ನು ವಿಶಿಷ್ಟ ಪ್ರಭಾರವನ್ನು ವಹಿಸಿಕೊಂಡ ದಿನಾಂಕದಿಂದಲೇ ಜಾರಿಗೆ ಬರುವುದೆಂಬ ಸ್ಪಷ್ಟೀಕರಣವನ್ನು ಈ ಸುತ್ತೋಲೆಯ ಮೂಲಕ ನೀಡಲಾಗಿದೆ.

ಸಹಿ,

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

CONFIDENTIAL

No. D1/MSP/2288/66-67

Office of the Registrar of Cooperative Societies in Mysore, Bangalore
Dated : 6th July, 1966.

CIRCULAR

Sub: Misappropriation and misuse of funds of Co-operative Institutions by the office bearers or employees – Launching of Criminal prosecutions – instructions – regarding.

*****

The attention of the officers of the Cooperative Department is invited to this office Circular No. DI/6218/61 dated 24th February 1962 wherein

detailed instructions have been issued for taking prompt action on criminal and civil sides whenever instances of misappropriations of the funds in cooperative institutions are brought to their notice. Subsequently two more circulars were issued under this office Nos. DI-MSP.8913/62-63 dated 5th November 1962 and DI.MSP. 17397/62-63 dated 10th April 1963 respectively. But it is observed that these instructions are not strictly and promptly followed in some cases. Such things will naturally give room for criticisms on the working of the Department.

When it is the duty of the department to see that the public funds are properly administered without any misuse or misapplication of money, the responsibilities of the officers are all the more great. It should be borne in mind that the interest of the State Government is also involved in many Cooperative Institutions due to the fact Government has provided financial considerations in the form of Share Capital, loans, subsidy etc. Therefore, it is necessary that proper control over these institutions should be exercised by the Officers of the Department particularly at district level. There is a general feeling that proper action is not being taken by the Officers of the department at District level even when instances of Mal-administration and misuse of funds are brought to their notice. Such an impression does not bring any credit to the department and on the other hand it will be a reflection on the efficiency of the officers concerned in particular and the Department as a whole.

In this connection, the observation made by the Hon'ble Chief Minister is reproduced below :-

"There are large no. of cases of misuse of funds and steps should be taken to see that such acts are duly dealt with."

Officers of all rank in the department should note the above observation of the Hon'ble Chief Minister and keep a vigil on the proper working, utilization of the funds by the Co-operative Societies in their jurisdiction and prevent any misuse, misapplication or misappropriation of funds in Cooperative Institutions. Further, it is the desire of the Government that all the officers should be cautioned in this behalf and intimated that any

slackness on the part of the any officers in this direction will be viewed seriously.

Hence, all the officers of the department are once again reminded of their duties and responsibilities in preventing all kinds of fraud misuse and misappropriation of the funds of co-operative societies by their frequent visits to the societies and conducting periodical audits and inspection. They should also take prompt action as per law whenever such instances are either noticed by them or brought to their knowledge. All omissions and commissions on the part of officers in this regard will be reported to Government for taking serious notice of such negligence and dereliction of duties on the part of such officer. Copies of all the three circulars cited above are also enclosed herewith for immediate reference and guidance.

The undersigned trusts that these circular instructions will be strictly followed. The receipt of these circulars should be acknowledged.

Sd/-
Registrar of Co-operative
Societies in Mysore, Bangalore.